ISSN:3048-7137

# ಆರಯ್

## ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು (Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ

ಸಂಪುಟ–೨ ಸಂಚಿಕೆ–೩

ಜುಲೈ-ಸೆಪ್ಟೆಂಬರ್ ೨೦೨೫

Kannada Online Double Blind Peer-Review Quarterly Research Journal

Volume-2, Number-3 July-September 2025

ಕಟ್ಟುಗ

ಬಸವರಾಜ ಕೋಡಗುಂಟಿ

ಬಂಡಾರ ಪ್ರಕಾಶನ

ಮಸ್ಕಿ

**ಆರಯ್**
ಕನ್ನಡ ಇಮ್ಮುಖ ಕುರುಡೋದು (Double Blind) ಮತ್ತು ದಟ್ಟೋದು
(Peer Review) ಮೂರು ತಿಂಗಳ ಆನ್ಲಯಿನ್ ಸಂಶೋಧನಾ ಪತ್ರಿಕೆ
ಸಂಪುಟ–೨, ಸಂಚಿಕೆ–೩, ಜುಲೈ–ಸೆಪ್ಟೆಂಬರ್ ೨೦೨೫
ISSN : 3048-7137

**ARAY**
Kannada Online Double Blind Peer-Review Quarterly
Research Journal
Volume-2, Number-3, July-September 2025
https://aray.in/

ಪುಟ/Pages : 130

ಹಕ್ಕು/@: ಪ್ರಕಾಶಕರು

ಬೆಲೆ/Price : **ರೂ. 50/–**

ಸಂಪಾದಕ
**ಪ್ರೊ. ಬಸವರಾಜ ಕೋಡಗುಂಟಿ**

ಅತಿಥಿ ಸಂಪಾದಕ
**ಪ್ರೊ. ಕೆ. ಶಾರದಾ**

ಸಲಹಾ ಮಂಡಳಿ
**ಪ್ರೊ. ಪುರುಷೋತ್ತಮ ಬಿಳಿಮಲೆ, ಪ್ರೊ. ನಟರಾಜ್ ಬೂದಾಳ್**
**ಪ್ರೊ. ಸತ್ಯನಾಥ್ ಟಿ.ಎಸ್. ಪ್ರೊ. ಶ್ರೀನಿವಾಸ ವಿ. ಪಾಡಿಗಾರ, ಪ್ರೊ. ಶ್ರೀಧರ್ ಎಸ್.ಎನ್.**

ಸಂಪಾದಕ ಮಂಡಳಿ
**ಪ್ರೊ. ಚೈತ್ರಾ ಪುಟ್ಟಸ್ವಾಮಿ, ಪ್ರೊ. ಮನು ವಿ ದೇವದೇವನ್**
**ಪ್ರೊ. ಗಿಲ್ ಬೆನ್–ಹೆರುತ್, ಪ್ರೊ. ತಾರಕೇಶ್ವರ್ ವಿ.ಬಿ., ಪ್ರೊ. ಪರಮಶಿವಮೂರ್ತಿ ಡಿ.ವಿ.**

ಕಾರ್ಯಕಾರಿ ಮಂಡಳಿ
**ಡಾ. ಮಲ್ಲೇಶಪ್ಪ ಸಿದ್ರಾಂಪುರ, ಡಾ. ರಾಮಕೃಷ್ಣ ಜಿ, ಡಾ. ಮಹಾಂತೇಶ ಪಾಟೀಲ್**
**ಡಾ. ಬಸಯ್ಯ ಸ್ವಾಮಿ, ಡಾ. ಮಧು ಬಿರಾದಾರ್, ಶ್ರೀ ರೇಣುಕಾ ಕೊಡಗುಂಟಿ**

ಪ್ರಕಾಶಕರು
**ಪರಶುರಾಮ ಕೋಡಗುಂಟಿ**
ಪ್ರಕಾಶಕ, ಬಂಡಾರ ಪ್ರಕಾಶನ
ಮಸ್ಕಿ–೫೮೪ ೧೨೪, ಜಿ. ರಾಯಚೂರು
ಕರೆ–೯೧ ೯೮೪೬೪ ೦೭೦೧೧
bandaraprakashana@gmail.com
https://bandaraprakashana.com

# ಪ ರಿ ವಿ ಡಿ


| | |
|---|---|
| ಜಾನಪದ ರಂಗಭೂಮಿಯಲ್ಲಿ ಮಹಿಳೆಯರ ಪಾತ್ರ<br>**ಗಂಗಾಧರ ದೈವಜ್ಞ** | **4-25** |
| ಕೇಳಿಕೆ ರಂಗಭೂಮಿ ಹಿನ್ನೆಲೆಯಲ್ಲಿ ಗಡಿಪ್ರದೇಶದ ಜನಪದ ರಂಗಪ್ರಕಾರಗಳು ಮತ್ತು ದ್ರಾವಿಡ ರಂಗಭೂಮಿಯ ಪರಿಕಲ್ಪನೆ<br>**ವೇಮಗಲ್ ನಾರಾಯಣಸ್ವಾಮಿ** | **26-49** |
| ಬಯಲಾಟದಲ್ಲಿ ಬಹು ಭಾಷಾ ಬಳಕೆ<br>**ಹೆಚ್.ಡಿ.ನರಸೇಗೌಡ** | **50-67** |
| ಬಯಲಾಟ ಕಲಾವಿದ ಜಡೆ ದೊಡ್ಡಬಸಪ್ಪ<br>**ಗಾದೆಪ್ಪ** | **68-78** |
| ಬಯಲಾಟಗಳಲ್ಲಿ ದ್ವಿ ಭಾಷಿಕತೆ<br>**ಇಮಾಮ್‌ಸಾಬ ಹಡಗಲಿ** | **79-87** |
| ಕನ್ನಡ ಬಯಲಾಟ ಪರಿಸರ ಮತ್ತು ಪ್ರೇರಣೆ<br>**ಹುಲುಗಪ್ಪ ಎನ್.ಎಚ್** | **88-99** |
| ತೊಗಲು ಗೊಂಬೆ ಆಟ<br>**ರುದ್ರಮುನಿ ಹೀರೆಮಠ** | **100-117** |
| ಕೋಲಾರ ಜಿಲ್ಲೆಯ ಕೇಳಿಕೆಗಳ ವೈಶಿಷ್ಟ್ಯತೆ<br>**ನಟರಾಜ ಬಿ.ಎನ್.** | **118-130** |

Aray, Vol - 2, No. 3

# ಬಯಲಾಟಗಳಲ್ಲಿ ದ್ವಿ ಭಾಷಿಕತೆ

## (ಕನಕಗಿರಿ ಬಯಲಾಟಗಳ ಹಸ್ತಪ್ರತಿಗಳನ್ನು ಅನುಲಕ್ಷಿಸಿ)

ಇಮಾಮ್‌ಸಾಬ ಹಡಗಲಿ

**ಸೂಚಕ ಪದಗಳು**

ಹಸ್ತಪ್ರತಿ, ದ್ವಿಭಾಷಿಕತೆ, ಬಯಲಾಟ, ಜನಪದ ರಂಗಭೂಮಿ

**ಸಾರಲೇಖ**: ‘‘ಕನಕಗಿರಿ ಬಯಲಾಟ ಪರಂಪರೆ ಉತ್ತರ ಕರ್ನಾಟಕದ ಜನಪದ ರಂಗಭೂಮಿಯ ಪ್ರಮುಖ ಅಂಶವಾಗಿದ್ದು, ಹಲವು ದ್ವಿಭಾಷಾ ಹಸ್ತಪ್ರತಿಗಳ ಮೂಲಕ ತನ್ನ ಸಾಂಸ್ಕೃತಿಕ, ಸಾಹಿತ್ಯಿಕ ಮತ್ತು ಸಾಮಾಜಿಕ ಮಹತ್ವವನ್ನು ಪೂರೈಸಿಕೊಂಡಿದೆ. ಈ ಅಧ್ಯಯನದಲ್ಲಿ ‘ಗಿರಿಜಾ ಕಲ್ಯಾಣ’, ‘ಚಿತ್ರಸೇನಾ ಗಂಧರ್ವ’, ‘ರತಿ ಕಲ್ಯಾಣ’ ಮತ್ತು ‘ಲವಕುಶರ ಕಾಳಗ’ ಹಸ್ತಪ್ರತಿಗಳ ಪರಿಶೀಲನೆಯ ಮೂಲಕ ಕನಕಗಿರಿ ಬಯಲಾಟದಲ್ಲಿ ಕಂಡುಬರುವ ಸಂಸ್ಕೃತ, ಕನ್ನಡ, ಹಳಗನ್ನಡ ಮತ್ತು ಉರ್ದು ಭಾಷೆಯ ಬಳಕೆ, ಭಾಷಾ ಶೈಲಿ ವೈವಿಧ್ಯ, ಕಥಾಹಂದರ, ಶ್ರುತಿಗೋಷ್ಠಿ ಮತ್ತು ಕಲಾವಿದರ ನೈಪುಣ್ಯವನ್ನು ವಿಶ್ಲೇಷಿಸಲಾಗಿದೆ. ಈ ಪರಂಪರೆ ಕೇವಲ ಮನೋರಂಜನೆಗಾಗಿ ಮಾತ್ರವಲ್ಲದೆ, ಭಾಷಾ ಪಾಂಡಿತ್ಯವನ್ನು ಉಳಿಸಿಕೊಳ್ಳುವುದರಲ್ಲಿ, ಪೀಳಿಗೆಯನ್ನು ಕಲಿಸುವುದರಲ್ಲಿ, ಸಾಂಸ್ಕೃತಿಕ ಐಕ್ಯತೆಯನ್ನು ಬಲಪಡಿಸುವುದರಲ್ಲಿ ಮಹತ್ವಪೂರ್ಣ ಪಾತ್ರ ನಿರ್ವಹಿಸುತ್ತದೆ. ಅಧ್ಯಯನವು ಹಸ್ತಪ್ರತಿಗಳ ಸಂಗ್ರಹ, ಕಥಾನಕ, ಭಾಷಾ ವೈಶಿಷ್ಟ್ಯಗಳು ಮತ್ತು ಪ್ರದರ್ಶನ ಶೈಲಿಗಳ ಮೂಲಕ ಉತ್ತರ ಕರ್ನಾಟಕದ ಬಯಲಾಟದ ಜೀವನಶೈಲಿಯನ್ನು ವಿವರಿಸುತ್ತಿದ್ದು, ಪೀಳಿಗೆಯ ಕಲಾವಿದರು ಈ ಕಲೆ ಉಳಿಸಿ ಬೆಳೆಸುವ ಅಗತ್ಯತೆಯನ್ನು ಒತ್ತಿ ಸೂಚಿಸುತ್ತದೆ.

ISSN : 3048-7137

## ಪ್ರಸ್ತಾವನೆ

ಕೆಲವು ಕಡೆ ಇನ್ನೂ ಬಯಲಾಟ ಜೀವಂತವಾಗಿದ್ದರೆ ಇನ್ನೂ ಕೆಲವು ಕಡೆ ಅವಸಾನದ ಅಂಚಿನಲ್ಲಿದೆ. ಇನ್ನೂ ಕೆಲವು ಕಡೆ ಬಯಲಾಟ ಹೇಳಹೆಸರಿಲ್ಲದೇ ಹಾಳಾಗಿಹೋಗಿದೆ. ಹೀಗೆ ಅವಸಾನ ನಾಶದ ನಡುವೆ ಅಳಿದುಳಿದ ಕಲಾವಿದರ ನಡುವೆ ಈಗ ಮತ್ತೊಮ್ಮೆ ರಂಗಕಲೆ ಚಾಲ್ತಿಗೆ ಬಂದಿದೆ. ಹಾಗಾಗಿ ಸುತ್ತಮುತ್ತ ಈ ಕಲೆ ಪ್ರದರ್ಶನದ ವೇಳೆ ಅಲ್ಲಿರುವ ಕಲಾವಿದರೊಂದಿಗೆ ಸಂದರ್ಶನ ಮಾಡಿ ಅವರಿಂದ ಹಸ್ತಪ್ರತಿ ಸಂಗ್ರಹಿಸುದ್ದುಂಟು. ಈ ಕೆಳಗೆ ಕೇವಲ ಕನಕಗಿರಿ ಮೂಲಸ್ಥಾನದಲ್ಲಿ ಪ್ರದರ್ಶನಗೊಳ್ಳುವ ಬಯಲಾಟದ ಕಥೆಗಳ ಹಸ್ತಪ್ರತಿ ಸಂಗ್ರಹಿಸಿದ್ದೇನೆ. ಮತ್ತು ಅದರ ಒಳಗಿನ ಪ್ರಮುಖ ವಿಷಯಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತಾ ಹೋಗಿದ್ದೇನೆ.

ಕುಮಾರರಾಮನ ಪತನದನಂತರ ಹುಟ್ಟಿಕೊಂಡ ವಿಜಯನಗರ ಸಾಮ್ರಾಜ್ಯವು ಉನ್ನತ ಉತ್ತುಂಗ ಶಿಖರದಲ್ಲಿರುವಾಗ ಪ್ರೌಢದೇವರಾಯನ ಕಾಲಕ್ಕೆ ಕನಕಗಿರಿಯ ಪಶುಪಾಲಕ ವಂಶಸ್ಥನಾದ ಕನಕನಾಯಕನ ಕಾಲಕ್ಕೆ ಇಲ್ಲಿ ಉಂಟಾದ ಕೆಲವೊಂದು ರಾಜಕೀಯ ಸ್ಥಿತ್ಯಂತರಗಳಿಂದ ಅವನಿಗೆ ಈ ಭಾಗದ ಭೂಮಿಯ ಸಾಮಂತನನ್ನಾಗಿ ನೇಮಿಸಲಾಯಿತು. ಅಲ್ಲಿಂದ ಕನಕಗಿರಿ ನಾಯಕರ ಆಳ್ವಿಕೆ ಪ್ರಭಾವ ದಟ್ಟವಾಗುತ್ತಾ ಹೋಯಿತು. ಅವರು ವಿಜಯನಗರ ಸಾಮ್ರಾಜ್ಯದ ವಿವಿಧ ಯುದ್ಧಗಳಲ್ಲಿ ಭಾಗವಹಿಸಿ ವೀರತ್ವವನ್ನು ಪ್ರದರ್ಶಿಸಿದ್ದಕ್ಕೆ ಅವರಿಗೆ ರಾಜಾಸ್ಥಾನದಲ್ಲಿ ಬಲಪಾರ್ಶ್ವದ ಮರ್ಯಾದೆಗಳು ಲಭಿಸಿದವು. ಇವರ ಸಾಮಂತ ಭೂಮಿಯು ಕನಕಗಿರಿ ಸುತ್ತಾಮುತ್ತಾ 64 ಹಳ್ಳಿಗಳ ಜಾಗೀರನ್ನು ನೀಡಲಾಗಿತ್ತು. ಈ ಪ್ರದೇಶವು ಕನಕಗಿರಿಯ ನಾಯಕರ ರಾಜ್ಯ ಎಂಬ ಮೇರೆ ಹಾಕಲ್ಪಟ್ಟಿತು.

ಕನಕಗಿರಿ ನಾಯಕರ ಕಾಲದ ಈ ರಾಜಕೀಯ ಪ್ರದೇಶವನ್ನು ಸಾಂಸ್ಕೃತಿಕ ಪ್ರತಿಭೆಗಳ ತವರು ಎಂದು ಕರೆದದ್ದುಂಟು. ಬಯಲಾಟ ಇಲ್ಲಿಯ ಜನತೆಗೆ ಆಹಾರ, ನೀರು, ಉದ್ಯೋಗದ ಜೊತೆಗೆ ಇದು ಒಂದು ಪ್ರಮುಖ ಭಾಗವಾಗಿ ಹೋಗಿತ್ತು. ಕನಕಗಿರಿಯನ್ನು ಒಂದು ಗ್ರಾಮವಾಗಿಯೋ ಅಥವಾ ಒಂದು ಪಟ್ಟಣವಾಗಿಯೋ ಇಲ್ಲವೇ ತಾಲೂಕಾಗಿ ಸಂಕುಚಿತಾರ್ಥದಲ್ಲಿ ನೋಡದೇ 'ಕನಕಗಿರಿ'ಯನ್ನು ವಿಜಯನಗರ ಸಾಮ್ರಾಜ್ಯದ ಒಂದು ಸಂಸ್ಥಾನವಾಗಿಯೋ ಅಥವಾ ಒಂದು ಸಾಂಸ್ಕೃತಿಕ ರಾಜಧಾನಿಯಾಗಿ ವಿಶಾಲಾರ್ಥದಲ್ಲಿ ನೋಡುವುದರಿಂದ ಈ ಅಧ್ಯಯನದ ವ್ಯಾಪ್ತಿಯು ವಿಶಾಲಗೊಳ್ಳುತ್ತದೆ.

ಕನಕಗಿರಿ ಬಯಲಾಟ ಪರಂಪರೆಗೆ ಒಂದು ವಿಶಿಷ್ಟ ಇತಿಹಾಸವಿದೆ. ನಾಡಿನಾದ್ಯಂತ ಖ್ಯಾತವಾಗಿರುವ ಶ್ರೀ ಕೃಷ್ಣ ಪಾರಿಜಾತದ ಕರ್ತೃ ಅಪರಾಳ್

ತಮ್ಮಣ್ಣ ಮೂಲತಃ ಕನಕಗಿರಿಯವನು. ಪಾರಿಜಾತದಿಂದಲೇ ಬಯಲಾಟ ಕಲೆ ವಿಕಾಸಗೊಂಡಿರುವ ಕಾರಣವು ಉಂಟು. ಇದರ ಜಾಡನ್ನು ಹಿಡಿದು ಕನಕಗಿರಿಯ ಬಯಲಾಟ ಪರಂಪರೆ ನಾಡಿಗೆ ನೀಡಿರುವ ಮಹತ್ವದ ಅಂಶಗಳನ್ನು ಈ ಅಧ್ಯಯನದ ಮೂಲಕ ನಾಡಿಗೆ ಪರಿಚಯಿಸುವ ಮತ್ತು ಈ ಕಲೆಯ ಪ್ರಾಮುಖ್ಯತೆಯನ್ನು ಸರಳವಾಗಿ ಬಿಂಬಿಸಿ ವಿಶ್ಲೇಷಿಸಿ ಇಲ್ಲಿನ ಕಲೆಯನ್ನು ವಿಶ್ವಾದ್ಯಂತ ಪಸರಿಸುವ ಮಹತ್ವಾಕಾಂಕ್ಷೆಯನ್ನು ಹೊಂದಿದೆ. ಈ ಕನಕಗಿರಿ ಬಯಲಾಟ ಪರಂಪರೆಯಲ್ಲಿ ಬಹುಮುಖ್ಯವಾಗಿ ಈ ಕೆಳಗಿನ ಅಂಶಗಳ ಮಹತ್ವ ಮತ್ತು ಅವಶ್ಯಕತೆಯನ್ನು ವಿಶ್ಲೇಷಿಸಿ ಅದರ ಸತ್ಯಾನುಸಂಧಾನ ಮಾಡಿ ಮುಂಬರುವ ಪೀಳಿಗೆ ಈ ಕಲೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಕಾರ್ಯ ಈ ಅಧ್ಯಯನದ ಮೂಲಕ ಮಾಡಿಕೊಡಬೇಕಿದೆ.

## ಗಿರಿಜಾ ಕಲ್ಯಾಣ ಹಸ್ತಪ್ರತಿಯಲ್ಲಿನ ಸಂಸ್ಕೃತ ಮತ್ತು ಕನ್ನಡ

ಕಂಪ್ಲಿಯ ಕವಿ ಸಾಲಿ ವೀರಣ್ಣ ಮಾಸ್ತರರು ರಚಿಸಿದ ಗಿರಿಜಾ ಕಲ್ಯಾಣ ಅರ್ಥಾತ್ ತಾರಕನ ವಧಾ ಎಂಬ ಕಥೆಯು ಕನಕಗಿರಿ ಮೂಲಸ್ಥಾನದಲ್ಲಿ 1953ರಿಂದಲೂ ಪ್ರದರ್ಶನ ಕಾಣುತ್ತಾ ಬಂದಿದೆ. ಆದರೂ ಅದಕ್ಕೆ ಸರಿಯಾದ ಆಧಾರ ಮತ್ತು ಮಾಹಿತಿಯ ಕೊರತೆಯಿದೆ. ಇದೆ ಕಥೆ 1993ರಲ್ಲಿ ಮತ್ತೊಮ್ಮೆ ಕನಕಗಿರಿಯಲ್ಲಿ ಪ್ರದರ್ಶನಗೊಂಡಿತು. ಆಗ ರಂಗಕಲೆ ಮತ್ತೊಮ್ಮೆ ತನ್ನ ಜೀವವನ್ನು ಪಡೆದುಕೊಂಡಿತು. ಅದರಲ್ಲಿ ಭಾಗವಹಿಸಿದ ಕಲಾವಿದರೂ ಈಗಲೂ ಜೀವಂತವಾಗಿ ಅಂದಿನ ಗತವೈಭವವನ್ನು ನಮ್ಮೆದುರಿಗೆ ಕಟ್ಟಿಕೊಡುತ್ತಾರೆ. ಸಾಲಿ ವೀರಣ್ಣ ಮಾಸ್ತರರು ರಚಿಸಿದ ಈ ಕೃತಿಯ ಮೂಲಪ್ರತಿ ಈಗಲೂ ಕನಕಗಿರಿಯ ಮಹಿಪತಿ ವಂಶಸ್ಥರ ಮನೆಯಲ್ಲಿದೆ, ಆದರೆ ಅದನ್ನು ಅವರು ಕೊಡಲು ನಿರಾಕರಿಸುತ್ತಾರೆ. ಈ ಕಥೆಯ ಲಿಪಿಯನ್ನು ಅಂದು ಕಲೆ ಪ್ರದರ್ಶಿಸಿದ ಯಂಕೋಬ ಮಹಿಪತಿ ಮತ್ತು ಕಾಶೀಪತಿ ಕಮ್ಮಾರ್ ಎತ್ತಿ ಬರೆದಿದ್ದಾರೆ. ಅದರ ಪ್ರತಿಲಿಪಿಗೆ ಎಲ್ಲೂ ಲೋಪವಾಗದಂತೆ ಬರೆದಿದ್ದು ಕೆಲವು ಕಡೆ ಭಾಷಾಶೈಲಿಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

'ಗಿರಿಜಾ ಕಲ್ಯಾಣ' ಹಸ್ತಪ್ರತಿಯಲ್ಲಿ ರತಿದೇವಿ ಮತ್ತು ಮನ್ಮಥನ ನಡುವೆ ನಡೆಯುವ ಒಂದು ಪ್ರಸಂಗದಲ್ಲಿ ಮನ್ಮಥನು ರತಿಗೆ ಒಂದೇ ಉಸಿರಿನಲ್ಲಿ ಇಡೀ ಹಂಪೆಯ ಚಿತ್ರಣವನ್ನು ತಂದಿಡುವುದು ಕವಿಯ ಭಾಷಾ ಜಾಣ್ಮೆಗೆ ಮತ್ತೊಂದು ಸೂಕ್ತ ಉದಾಹರಣೆ ಎನಿಸುತ್ತದೆ. ಅದರ ಸಂಭಾಷಣೆಯ ಒಂದು ತುಣುಕು ಇಲ್ಲಿದೆ.

ISSN : 3048-7137

**ಮನ್ಮಥನ ಮಾತು :** ಅಹೇ ರತಿ ಯನ್ನ ಮೋಹದ ಸತಿ । ಸಂಸಾರ ತಾಪತ್ರೆಗಳೆಂಬ ಧಾರೀಕ್ಷಣ ಪುತ್ರೆಕ್ಷಣ ಆರ್ತೇಕ್ಷಣ ಧನೀಕ್ಷಣ ಇವುಗಳು ಬಿಟ್ಟು ಜ್ಞಾನಯೋಗಿ ಈ ಪಂಪಾಸ್ಥಳಕ್ಕೆ ಬಂದು ಮಹಾಕ್ಷೇತ್ರಮಂ ನೋಡುವ ಪರಿಯಾಂತರ ಮಾನವಜನ್ಮಕ್ಕೆ ಮುಕ್ತಿಯೇ ಇಲ್ಲವೆಂದು ಜಗತ್ಯಕ್ಕೆ ಕೈಯತ್ತಿ ತೋರುವ ಮಹಾದ್ವಾರದ ಗೋಪುರದ ಕಲಸಂಗಳು ನೋಡು ರತಿ । ಯಲ್ಲಿ ನಡೆದರು ತೆಂಗಿನಾಂತರಗಳು । ಯತ್ತ ನೋಡಿದರೂ ರಸದಾಳಿಯ ಪೆರ್ಸ ಗೋನೆಗಳು ಆಕಾಶವೆಂಬ ಕನ್ನಡಿಯೊಳ್ ಕಾಣುವುವು ಕಾಂತೆ । ಬಾಲಸೂರ್ಯನ ಬೆಳಕಿಗೆ ಹೊಳೆಯುವ ಮಾತಂಗ ಮೌಲ್ಯವಂತ ಹೇಮಕೂಟ ಕಿಷ್ಕಿಂದಾ ಋಷ್ಯಮೂಕ ಪಂಚಪರ್ವತಗಳ ಶಿಲೋಚ್ಛಾಯಂಗಳ ನೋಡು । ಯಲ್ಲಿ ನೋಡಿದರೂ ತಂಗಾಳಿಯಂ ಮಂಟಪಗಳು । ಇದೇ ನೋಡು ವಿಜಯ ವಿಟಲ ದೇವತಾ ಭವನಂ। ಇದೇ ನೋಡು ವೆಂಕಟೇಶ್ವರ ದೇವಳ । ಹೊಂದಕ್ಕೆ ಶ್ರೀರಾಮಚಂದ್ರನು ಸೀತೆಯಂ ರಾವಣನಿಗೆ ಪೋಗಾಡಿ ಪಂಪಾಪತಿಯಂ ಪೂಜೆ ಮಾಡಿ ಚಾರ್ತುಮಾಸಕ್ಕೆ ಕುಳಿತ ಪ್ರಸನ್ನ ವಿರುಪಾಕ್ಷೇಶ್ವರನ ಮುಂದೆ ಸೇವಕನಾದ ಮಾಲ್ಯವಂತ ರಘುನಾಥನಂ ನೋಡು । ಅಹೇ ವಲ್ಲಭಿ । ಯಿಕೋ ಇಲ್ಲಿ ನೋಡು ಈ ಮಾತಂಗದೊಳ್ ಮುಪ್ಪಿನ ಮುದಕರು ಹೋಗಿ ಶಿವ ಓಂ ಹರ ಓಂ ಯಂದು ಸ್ನಾನಮಂ ಗೈದರೆ । ಹದಿನಾರು ವರುಷ ವಯಸ್ಸು ತಿರುಗಿ ಬಂಗಾರದಂತೆ ದೇಹ ಹೊಳೆಯವುದು । ಈ ತೀರ್ಥವೇ ರಿಣಮುಕ್ತ ತೀರ್ಥವೆನುವುದು । ಅಧಿಕ ಪಾಪಗಳಂ ಸುಟ್ಟು ಭಸ್ಮ ಮಾಡುವ ಸೂರ್ಯನಾರಾಯಣ ತೀರ್ಥ ಜ್ಞಾನತೀರ್ಥ ಚಕ್ರತೀರ್ಥ ದುರ್ಗಿತೀರ್ಥ ಭಾಗೀರಥೀ ತೀರ್ಥ ಶಿವಲಿಂಗ ತೀರ್ಥ ಸೀತಾ ಸರೋವರ ತೀರ್ಥ ತುಂಬರ ತೀರ್ಥ ಭೀಮತೀರ್ಥ ವಶಿಷ್ಠ ತೀರ್ಥ ನಾಗತೀರ್ಥ ನಾರದತೀರ್ಥ ಜಮದಗ್ನಿ ತೀರ್ಥ ಯಿಕೋ ತೀರ್ಥಂಗಳ ಮೇಲ್ಭಾಗದೊಳ್ ವಪ್ಪುವ ಕೃಷ್ಣಾಪುರವೆಂಬ ದ್ವಾರಕಾವತಿಗೆ ಕೋಟಿಗಧಿಕವಾದ ದೊಡ್ಡ ಶಿವಲಿಂಗಮಂ ನೋಡು । ಉಗ್ರನರಸಿಂಹನಂ ಕಂಡೆಯಾ । ಇದೇ ನೋಡು ವಿದ್ಯಾರಣ್ಯ ಸಿಂಹಾಸನಂ ...............

## ಚಿತ್ರಸೇನಾ ಗಂಧರ್ವ ಹಸ್ತಪ್ರತಿಯಲ್ಲಿನ ದ್ವಿ ಭಾಷಿಕತೆ

ಸೋಮಸಾಗರದ ಕವಿ ರಾಮಪ್ಪ ಸಂಗಟಿ ರಚಿಸಿದ ಮಹಾಭಾರತದ ಅರಣ್ಯಪರ್ವದ ಕಥೆ ಚಿತ್ರಸೇನಾ ಗಂಧರ್ವ ಅರ್ಥಾತ್ ಕೌರವನ ಗರ್ವಭಂಗ ಕಥೆಯು ಕನಕಗಿರಿಯಲ್ಲಿ 1978ರಲ್ಲಿ ಮೊಟ್ಟಮೊದಲ ಬಾರಿಗೆ ಪ್ರದರ್ಶನಗೊಂಡಿತ್ತು. ಇದಕ್ಕೆ ಸಾಕ್ಷಿಯಾಗಿ ಕಾಶಿಪತಿ ಕಮ್ಮಾರ್ ತಮ್ಮ

ಅನುಭವವನ್ನು ಹಂಚಿಕೊಳ್ಳುತ್ತಾರೆ. ಕಥೆಯು ಕೃಷ್ಣನ ಆಗಮನದಿಂದ ಆರಂಭವಾಗಿ ದುರ್ಯೋಧನನ ಗರ್ವಭಂಗಕ್ಕೆ ಮುಕ್ತಾಯವಾಗುತ್ತದೆ. ಈ ಕತೆಯಲ್ಲಿ ಬಳಸಿರುವ ಭಾಷೆಯು ಕೂಡ ಸಂಸ್ಕೃತ ಮತ್ತು ಹಳಗನ್ನಡದಿಂದ ಕೂಡಿದೆ. ಕಥೆಯ ಆರಂಭ ಕೃಷ್ಣನ ಸಂಸ್ಕೃತ ಶ್ಲೋಕದಿಂದ ಆರಂಭವಾಗುತ್ತದೆ. ಸತ್ಯಭಾಮೆ ದ್ರೌಪದಿಗೆ ಕಾಣುವ ಹಂಬಲವನ್ನು ವ್ಯಕ್ತಪಡಿಸುವ ದಕ್ಷಣಾಡಿಕೆ ಹಳಗನ್ನಡದ ರಾಗಮಾಲಿಕೆಯಿಂದ ಕೂಡಿದ್ದು ಕವಿಯ ಕಾವ್ಯನಾಮವು ಅದರಲ್ಲಿ ನುಸುಳುತ್ತದೆ. ಭಾಷೆಯು ಉದ್ದುದ್ದ ವಾಕ್ಯಗಳ ನಡುವೆ ಬರುವ ವೀರ ರೌದ್ರವತಾರದ ಸನ್ನಿವೇಶಗಳಲ್ಲಿ ಬರುವ ಭಾಷೆಯ ಪ್ರೌಢಿಮೆ ಕೇಳುಗರ ಕುತೂಹಲ ತಣಿಸುತ್ತದೆ. ಹಳಗನ್ನಡದ ಮಿಶ್ರಿತ ಕನ್ನಡದಲ್ಲಿ ಭಾಷಾ ಲಯವು ಸ್ಪಷ್ಟವಾಗಿ ನಮಗೆ ಗೋಚರಿಸುತ್ತದೆ. ಪರಿಚಯ ನೀಡುವ ವಾಕ್ಯಗಳಲ್ಲಿ ಸಾರಥಿ ಮತ್ತು ಪಾತ್ರಧಾರಿಗಳ ನಡುವೆ ನಡೆಯುವ ಸಂಭಾಷಣೆ ಲಾಲಿತ್ಯ ಸೂಸುವ ರೀತಿಯಲ್ಲಿ ಕಂಡುಬರುತ್ತದೆ. ಈ ಕಥೆ ಕೇವಲ ಪ್ರದರ್ಶನಾತ್ಮಕವಾಗಿರದೆ ಬದುಕನ್ನು ಕಟ್ಟುವ ಕಾವ್ಯವಾಗಿ ಸಾಮಾಜಿಕ ಕಾಳಜಿಯನ್ನು ಈ ಕಥೆಯಲ್ಲಿ ವಿಶೇಷವಾಗಿ ನುಡಿಯುತ್ತದೆ. ಕನಕಗಿರಿ ಮೂಲಸ್ಥಳದ ಭಾಷೆಯ ಜೊತೆಜೊತೆಗೆ ಇದರಲ್ಲಿ ಸಂಸ್ಕೃತ ಶ್ಲೋಕಗಳು ಹಾಸುಹೊಕ್ಕಾಗಿ ಬಂದಿವೆ. ಅಂದರೆ ಅಂದಿನ ಅನಕ್ಷರಸ್ಥ ಕಲಾವಿದರಿಗೆ ಬಾಯಿ ಪಾಠದ ಮೂಲಕ ಇಂತಹ ದೊಡ್ಡ ದೊಡ್ಡ ಶ್ಲೋಕಗಳನ್ನು ಕಲಿಸಲಾಗುತ್ತಿತ್ತು. ಅದರ ಜೊತೆಗೆ ಅದರ ಸಾರಾಂಶವನ್ನು ಹೇಳುತ್ತಿದ್ದರು. ಅಂದರೆ ಅಂದಿನ ಕಲಾವಿದರೂ ದ್ವಿಭಾಷಾ ಕಲಿಕೆಯಲ್ಲಿ ತೊಡಗಿದ್ದರೆಂದು ಕಂಡುಬರುತ್ತದೆ.

ಶ್ರೀಕೃಷ್ಣನ ಮಾತು : ಹರಿಣಾಪಿ ಹರೇಣಾಪಿ ಬ್ರಹ್ಮಣಾಪಿ ಸುರಾರೇಪಿ ।
ಲಲಾಟ ಲಿಖಿತ ರೇಖಾ ಪರಿಪೂರ್ಣ ನಪಶ್ಯತ ॥

ಅಹೇ ಕಾಂತೆ ಈ ಶ್ಲೋಕದ ತಾತ್ಪರ್ಯವೇನೆಂದರೆ । ಹರಿಹರಾ ಬ್ರಹ್ಮಾದಿ ಗಳಿಂದಲೂ ಫಣಿಯಲ್ಲಿ ಬರೆದ ಲಿಖಿತವನ್ನು ಅಳುಕಿಸಲು ಅಸಾಧ್ಯ । ಅವರವರು ಮಾಡಿದ ಕರ್ಮ ಅವರೇ ಅನುಭೋಗಿಸಬೇಕು ಕಾಂತೇ ಧೀಮಂತೆ । (ಚಿತ್ರಸೇನಾ ಗಂಧರ್ವ ಹಸ್ತಪ್ರತಿಯಿಂದ) ಎಂಬ ಕೃಷ್ಣನ ಮಾತಿನಲ್ಲಿ ಕವಿ ಬಳಸಿರುವ ದ್ವಿಭಾಷಾ ಪಾಂಡಿತ್ಯ ಎದ್ದು ಕಾಣುತ್ತದೆ. ಕವಿಯ ಕನ್ನಡ ಸುಲಲಿತ ಭಾಷೆಯೊಂದಿಗೆ ಕಠಿಣ ಬಂಧುರವನ್ನು ಹೊಂದಿದ ಸಂಸ್ಕೃತದ ಶ್ಲೋಕವನ್ನು ಕಲಾವಿದ ಕೈಯಲ್ಲಿ ಹೇಳಿಸಿ ರಸಾಸ್ವಾದಕ್ಕೆ ಭಂಗಬಾರದಂತೆ ಅದರ ಅರ್ಥವನ್ನು ಪ್ರೇಕ್ಷಕರಿಗೆ ತಿಳಿಸಲು ಮತ್ತೆ ಇದರ ತಾತ್ಪರ್ಯವೇನೆಂದರೆ ಎಂದು ಹೇಳಿಸಿ ಸಹೃದಯರಿಗೆ ಮನಮುಟ್ಟುವ

ISSN : 3048-7137

ಕನ್ನಡ ಭಾಷೆಯಲ್ಲಿ ತಿಳಿಸಿ ಹೇಳುವ ಕಲೆ ಕವಿಯ ಭಾಷಾ ಪಾಂಡಿತ್ಯವನ್ನು ಸೂಚಿಸುತ್ತದೆ. ಹಾಗಾಗಿ ಈ ಹಸ್ತಪ್ರತಿಯಲ್ಲಿ ಸಂಸ್ಕೃತ ಮಿಶ್ರಿತ ಕನ್ನಡ ಭಾಷಾ ಬಳಕೆಯ ಆಯಾಮವನ್ನು ಕಾಣಬಹದು.

## ರತಿ ಕಲ್ಯಾಣ ಹಸ್ತಪ್ರತಿಯಲ್ಲಿನ ಉರ್ದು ಮತ್ತು ಕನ್ನಡ

ಕನಕಗಿರಿ ನಿವಾಸಿ ಗುರುಬಸಯ್ಯ ವಸ್ತ್ರದ್ ರಚಿತ ಈ ಕಥೆ ರತಿ ಕಲ್ಯಾಣ ಅರ್ಥಾತ್ ಕೌಂಡಲಿಕನ ವಧೆ ರೌದ್ರಮಯ ಕಥಾ ಸನ್ನಿವೇಶವಾಗಿದೆ. ಈ ಕಾವ್ಯ ಪುರಾಣ ಪ್ರಸಿದ್ಧ ದೇವಿಯ ಮಹಾತ್ಮೆಯನ್ನು ವಿವರಿಸುತ್ತದೆ. ಕಥೆಯಲ್ಲಿ ಸರಳಗನ್ನಡ ಬಳಕೆಯಾಗಿರುವುದು ಮತ್ತು ಅರ್ಥ ಕಥೆ ಕಾವ್ಯಾತ್ಮಕವಾಗಿರುವುದು ಇಲ್ಲಿನ ಕವಿಗಳಿಗೆ ಕಾವ್ಯ ಸರಳವಾಗಿ ಒಲಿದು ಬಂದಂತೆ ಅನಿಸುತ್ತದೆ. ಕಾರಣ ಅಪರಾಳ್ ತಮ್ಮಣ್ಣ ಕವಿಯ ಶ್ರೀ ಕೃಷ್ಣ ಪಾರಿಜಾತದ ಛಾಯೆ ಇಲ್ಲಿ ಕಾಣಿಸಿಗುತ್ತದೆ. ಭಾಷೆಯ ಸ್ಪಷ್ಟತೆ ಅಲ್ಲಲ್ಲಿ ಕ್ಲಿಷ್ಟಮಯ ವಾತಾವರಣಕ್ಕೆ ಒಳಪಟ್ಟರೂ ಕಲಾವಿದರೂ ಎಳ್ಳಷ್ಟು ಬೇಸರಿಸಿಕೊಳ್ಳದೆ ಅವುಗಳನ್ನು ಸರಾಗವಾಗಿ ಸಂಭಾಷಣೆಯ ಮೂಲಕ ಪ್ರೇಕ್ಷಕರನ್ನು ಮನರಂಜಿಸುತ್ತಾರೆ. ಕಥೆಯ ನಡುವೆ ನುಸುಳುವ ಕಾವ್ಯ ಹಳಗನ್ನಡ ದಲ್ಲಿದ್ದು ಕನಕಗಿರಿ ಪುರ ದೈವದ ಹೆಸರು ಮತ್ತೆ ಮತ್ತೆ ಇಲ್ಲಿ ಪ್ರಸ್ತಾಪವಾಗುತ್ತದೆ.

ವೀರ ರಸ ಪ್ರಧಾನವಾದ ಕಾವ್ಯವಾಗಿರುವುದರಿಂದ ವೀರತೆಯ ಸಂಭಾಷಣೆ ಕಥೆಯ ಪ್ರಮುಖ ಆಕರ್ಷಣೆ. ರತಿದೇವಿಯ ಕಲ್ಯಾಣದ ಸಂದರ್ಭದಲ್ಲಿ ಮನ್ಮಥನ ನಡುವೆ ನಡೆಯುವ ಶೃಂಗಾರರಸ ಭರಿತ ಸನ್ನಿವೇಶ ಕಥೆ ಭಾಷೆಗೆ ಸರಾಗವಾಗಿ ನಡೆಯುವಂತೆ ಮಾಡುತ್ತದೆ. ಕೊನೆಯಲ್ಲಿ ಕೌಂಡಲಿಕನ ಪ್ರವೇಶ ಮತ್ತು ದೇವಿಯ ಪ್ರತ್ಯಕ್ಷ ಸಮಯದಲ್ಲಿ ಕವಿಯ ನಿಜ ಪ್ರತಿಭೆ ಅನಾವರಣಗೊಂಡಿದ್ದು ಕನ್ನಡ ಭಾಷೆಯ ಪ್ರೌಢಿಮೆ ಮೆರೆದಿದ್ದಾನೆ.

ನಿಜಾಮರ ಕಾಲದ ಆಡಳಿತದಲ್ಲಿ ಜನಪದ ಕವಿಗಳ ಮೇಲೆ ಉರ್ದು ಸಾಹಿತ್ಯ ಬೀರಿದ ಪ್ರಭಾವವನ್ನು ಈ ಮೇಲಿನ ಭೈರವಿ ರಾಗದಲ್ಲಿರುವ ಹಿಂದಿನ ಹಾಡಿಕೆಯಲ್ಲಿ (ದಕ್ಷಿಣಾಡಿಕೆ) ಸ್ಪಷ್ಟವಾಗಿ ಕಾಣಬಹುದು ದೂರ್ವಾಸರು ಕೌರವನ ಆದೇಶದ ಮೇರೆಗೆ ಧರ್ಮರಾಯನಲ್ಲಿ ಕಾಡಿನಲ್ಲಿ ಭಿಕ್ಷೆ ಕೇಳಲು ಬಂದಾಗ ದ್ರೌಪದಿಯ ಎದುರಿಗೆ ಈ ಹಾಡನ್ನು ಕವಿ ಕಲಾವಿದನಾದ ದೂರ್ವಾಸ ಮುನಿಯ ಬಾಯಲ್ಲಿ ಹೇಳಿಸಿರುವುದು ಹಿಂದೂ ಮುಸ್ಲಿಂ ಐಕ್ಯತೆಯ ಸಂಕೇತವಾಗಿ ಭಾಷೆ ಪ್ರತಿಧ್ವನಿಸುತ್ತದೆ. ವಿವಿಧ ದೃಷ್ಟಿಕೋನಗಳಿಂದ ಭಾಷೆಯನ್ನು ನೋಡುವುದು ಒಂದು ಸವಾಲಿನ ಕೆಲಸವೇ ಸರಿ.

ಉದಾ : ತೂ ಹೈ ಮೇರಿ ಪ್ಯಾರ್ ಕಿ ರಂಭೆ
ತೂಜೆ ಘೊಡಕರ್ ಇರಲಿ ನಾ ಹ್ಯಾಂಗೆ
ತೇರಿ ಪೂಜಾ ಹರದಿನ ಕರೆಂಗೆ

'ರತಿ ಕಲ್ಯಾಣ' ಎಂಬ ಬಯಲಾಟದ ಹಸ್ತಪ್ರತಿಯಲ್ಲಿ ಮನ್ಮಥನು ರತಿಯ ಮೇಲೆ ಮೋಹ ಪರವಶನಾಗಿ ಶೃಂಗಾರರಸದಲ್ಲಿ ಹಾಡಿದ ಹಿಂದ್ಲಾಡಿಕೆ ಇದು. ಕವಿ ಭಾಷೆಯ ಬಳಕೆಯಲ್ಲಿ ಇಲ್ಲಿ ವಿಶಿಷ್ಟ ಪ್ರಯೋಗ ಮೆರಗು ನೀಡಿರುವುದು ಉರ್ದು ಕನ್ನಡದ ಸಾಹಿತ್ಯ ಸಾಮರಸ್ಯಕ್ಕೆ ಮತ್ತೊಂದು ನೈಜ ಸಾಕ್ಷಿ ಎನ್ನಬಹುದು. ಹೀಗೆ ದೊರೆತ ಹಸ್ತಪ್ರತಿಗಳ ದೃಷ್ಟಿಯಿಂದ ಉತ್ತರ ಕರ್ನಾಟಕದ ಜನಪದ ರಂಗಭೂಮಿಯ ಕ್ಷೇತ್ರದಲ್ಲಿ ಬಯಲಾಟ ಸಂವಹನ ಕ್ಷೇತ್ರದಲ್ಲಿ ಮಾದರಿ ಕಾರ್ಯನಿರ್ವಹಿಸುತ್ತಿದೆ. ಕಥೆ ಬರೆದ ಕವಿಯಲ್ಲಾಗಲಿ ನಿರ್ದೇಶಿಸುವ ಭಾಗವತನಲ್ಲಾಗಲಿ ಆಟ ಆಡಿ ತೋರುವ ಕಲಾವಿದನಲ್ಲಾಗಲಿ ಭಾಷೆ ಪ್ರೇಕ್ಷಕ ವರ್ಗಕ್ಕೆ ಮನಮುಟ್ಟುವ ಜೊತೆಗೆ ಭಾಷೆ ಉಳಿಸುವಲ್ಲಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರುವಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದಾರೆ.

## ವೀರ ಲವಕುಶರ ಕಾಳಗ ದ್ವಿ ಭಾಷಿಕತೆ

ಉತ್ತರ ಕರ್ನಾಟಕದ ಬಯಲಾಟದ ಕೃತಿಗಳಲ್ಲಿ ಇಂದಿಗೂ ಹಳಗನ್ನಡ ಭಾಷೆ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿದೆ. ಆಧುನಿಕ ವರ್ತಮಾನದ 4ಜಿ ಯುಗಕ್ಕೆ ಜಿಗಿದಿರುವ ಮಾನವ ಕನ್ನಡ ಮಿಶ್ರಿತ ಇಂಗ್ಲೀಷ್ ಭಾಷೆಯಲ್ಲಿ ಮುಳುಗಿ ಕಂಗ್ಲೀಷ್ ಆಡುತ್ತಾ ನಡೆದಿರುವುದು ಶೋಚನೀಯ. ಅದರ ನಡುವೆಯೂ ಉತ್ತರ ಕರ್ನಾಟಕದ ಕಲಾವಿದನಾಗಲಿ ಕವಿಯಾಗಲಿ ಅದರ ಛಾಯೆಗೆ ಬೀಳದೆ ಭಾಷೆಯ ಅಸ್ಮಿತೆಗಾಗಿ ತಡಕಾಡದೇ ಕಠಿಣ ಬಂಧುರವಾಗಿ ಅನುಭವಿಸದೇ ಸಲಿಸಾಗಿ ಹಳಗನ್ನಡ ನುಡಿಯುತ್ತಾನೆ. ಭಾಷೆ ಬರವಣಿಗೆಯಲ್ಲಿ ಕವಿಯು ಎಲ್ಲಿಯೂ ಮಿಸುಕಾಡದಂತೆ ಬರೆದಿದ್ದು ಅಷ್ಟೇ ಗಟ್ಟಿಯಾಗಿ ಕಲಾವಿದನು ಉಸುರುವಂತ ಶೈಲಿ ಇಲ್ಲಿರುವುದು ಗಮನಾರ್ಹ.

ಉದಾ : ರಾಮಚಂದ್ರನ ಮಾತು : ಭಳಿಭಳಿರೈ ಅಖಿಳಮಣಿ ಗಣಸ್ಪುಟದಿಂದ ನಟನಟಿಸುವ। ಕಿರಿಟೋದ್ಭರಿತ ಕುಟಿಲಕಟ ಪುಟ ಬೇಧನದ ಶೆರದಿಯಂ ಪಿಡಿದು । ತಮೋತ್ಕಟ ವೈರಿಕೋಟಿ ಪ್ರಭಾವದಿಂದ । ಶಮ್ರುಖಡ್ಗದ ಭಯಂಕರಕ್ಕೆ ದಿಟ್ಟ ಹೃದಯದೇ । ಶಟೆಯಲ್ಲದೇ ಚುಟುಲಮತಿಯುತ ಹಸ್ತ ಸಂಘಟಿತನಾಗಿ । ನಿಖಿಳ ಹರಿಕುಲವೆಂಬ ಗಜಕ್ಕೆ ಕಂಠೀರವಾನೆಂತೆನಿಸುವಾ । ಮುಕುಟಾಗ್ರಗಣ್ಯನಾದ

ISSN : 3048-7137

ಪರಕ್ರಾಮದಿ ಜಂಬದಿ ನಾಮವನ್ನು ಪ್ರಕಟಿಸುವ ಮಾನವ ನೀನುದಾರು ಕಿಂಕರ ಸುಖಕಂಕರಾ। ( ವೀರ ಲವಕುಶರ ಕಾಳಗ ಹಸ್ತಪ್ರತಿಯಿಂದ )

ಭಾಷೆಯ ದೃಷ್ಟಿಯಿಂದ ನೋಡುವುದಾದರೆ ಕನಕಗಿರಿ ಭಾಗದ ಬಯಲಾಟದ ಹಸ್ತಪ್ರತಿ 'ಲವಕುಶರ ಕಾಳಗ'ದ ಕಥಾ ಆರಂಭದಲ್ಲಿ ಕವಿಯು ಸಾರಥಿಯಿಂದ ರಾಮಚಂದ್ರನ ಪರಿಚಯ ಕೇಳುವಾಗ ಶ್ರೀರಾಮನೇ ನುಡಿಯುವ ಈ ಹರಳು ಉರಿಯುವಂತಹ ಭಾಷೆ ಸಂಪೂರ್ಣ ಹಳಗನ್ನಡ ರೂಪದವಲ್ಲದಿದ್ದರೂ ಅಲ್ಪಸ್ವಲ್ಪ ಶುದ್ಧಕನ್ನಡದ ನಡುವೆ 90% ಹಳಗನ್ನಡವೇ ಬಳಸಿಕೊಂಡಿದ್ದಾನೆ. ಕವಿಯ ಈ ಬಳಕೆ ಭಾಷೆಯು ಅವನ ಹಳಗನ್ನಡದ ಮೇಲೆ ಹಿಡಿತ ಕಂಡು ಬರುತ್ತದೆ. ಅದನ್ನು ಅಷ್ಟೇ ಸಲಿಸಾಗಿ ಕಲಾವಿದನ ಬಾಯಿಂದ ಹೇಳಿಸುವ ಕಲೆಯು ಅವನಿಗೆ ಗೊತ್ತು. ಕಾಠಿಣ್ಯದ ನಡುವೆಯು ಭಾಷೆಯ ಆಯಾಮದ ಮೂಲಕ ನೋಡುವುದಾದರೆ ಬಿಗು ಬಂಧುರವನ್ನು ಹೊಂದಿದ್ದು ಹಳಗನ್ನಡ ಈ ಹಸ್ತಪ್ರತಿಯಲ್ಲಿ ರಾರಾಜಿಸುತ್ತದೆ.

**ಕೊನೆಯಲ್ಲಿ**

ಪದನರಿದು ನುಡಿಯಲುಂ ನುಡಿದುದ
ನರಿಯಲುಮಾರ್ಪರ್ಪರಾ ನಾಡವರ್ಗಳ್
ಚದುರರ್ ನಿಜದಿಂ ಕುರಿತೋದದೆಯುಂ
ಕಾವ್ಯ ಪ್ರಯೋಗ ಪರಿಣತಮತಿಗಳ್

– ಕವಿರಾಜಮಾರ್ಗ

ಕನ್ನಡ ಆದಿ ನುಡಿಗ್ರಂಥ ಕವಿರಾಜಮಾರ್ಗಕಾರ ಕನ್ನಡ ನಾಡಿನ ಜನತೆಯ ಕುರಿತು ಸತ್ಯವನ್ನೆ ನುಡಿದಿದ್ದಾನೆ. ಪದಗಳನ್ನು ಅರಿತು ನುಡಿಯುವವರು ನುಡಿದುದನ್ನು ಅರಿತು ನಡೆಯುವವರು ನಮ್ಮ ಕನ್ನಡ ನಾಡಿನ ಜನತೆ ಚತುರರು ಬುದ್ಧಿವಂತರು ಪ್ರತಿಭಾವಂತರಾಗಿದ್ದು ಯಾವುದನ್ನು ಕುಳಿತು ಕುರಿತು ಓದದೆ ತತ್ಕ್ಷಣವೇ ಯಾವ ವಿಷಯದ ಮೇಲಾದರೂ ಕಾವ್ಯಗಳನ್ನು ಕಟ್ಟಿ ಹಾಡಬಲ್ಲವರಾಗಿದ್ದರು ಎನ್ನಲು ನಮ್ಮ ಈ ಬಯಲಾಟದ ಕೃತಿಗಳೇ ಸಾಕ್ಷಿ. ಭಾಷೆ ಮನುಷ್ಯನಿಗೆ ಮನೋರಂಜನೆ ನೀಡುವುದಷ್ಟೆ ಅಲ್ಲದೇ ಬುದ್ಧಿಯನ್ನು ಬೆಳೆಸುತ್ತದೆ. ಮನಸ್ಸುಗಳನ್ನು ಬೆಸೆಯುತ್ತದೆ. ವಿವಿಧ ಜಾತಿ ಧರ್ಮಗಳಲ್ಲಿ ಏಕತೆಯನ್ನು ಮೂಡಿಸುತ್ತದೆ. ಹಾಗಾಗಿ ಒಂದು ಬಯಲಾಟದ ಹಸ್ತಪ್ರತಿಯ ಕಥೆಯನ್ನು ಒಂದು ಮನೋರಂಜನಾತ್ಮಕವಾಗಿ ನೋಡದೇ ಭಾಷೆಯನ್ನು ಅಭಿವೃದ್ಧಿಗೊಳಿಸುವ ಸಾಧನವಾಗಿಯೂ ಕಾಣಬಹುದು.

## ಆಕರ ಗ್ರಂಥಗಳು

1. ರಾಗೌ, ಜನಪದ ಸಾಹಿತ್ಯ ರೂಪಗಳು, 2012, ತನು ಮನ ಪ್ರಕಾಶನ ಮೈಸೂರು
2. ರಾಮಣ್ಣ ಲೋಕ್ರ ವೀರಾಪುರ, ಲವಕುಶರ ಕಥೆ, 2000, ಹಸ್ತಪ್ರತಿ
3. ರಾಮಣ್ಣ ಎಸ್ ಎಸ್, ಚಿತ್ರಸೇನಾ ಗಂಧರ್ವ, 1998, ಹಸ್ತಪ್ರತಿ
4. ಸಾಲಿ ವೀರಣ್ಣ ಕಂಪ್ಲಿ, ಗಿರಿಜಾ ಕಲ್ಯಾಣ, 1998, ಹಸ್ತಪ್ರತಿ